# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1278
2) ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
3) ಉತ್ತರಿಸುವ ದಿನಾಂಕ : 29.12.2022
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ವಿವಿಧ ಹಂತಗಳ ಮೂಲಕ ಸರ್ಕಾರವು 2017 ರಿಂದ 2022ರವರೆಗೆ ಎಷ್ಟು ಜಿ.ಎಸ್.ಟಿ ತೆರಿಗೆಯನ್ನು ಸಂಗ್ರಹಿಸಿದೆ; (ಇಲಾಖಾವಾರು ಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ವಿವಿಧ ಹಂತಗಳ ಮೂಲಕ ಸರ್ಕಾರವು 2017 ರಿಂದ 2022ರವರೆಗೆ (ನವೆಂಬರ್ ಅಂತ್ಯಕ್ಕೆ) ಸಂಗ್ರಹಿಸಿರುವ ಜಿಎಸ್‌ಟಿ ವಿವರ ಈ ಕೆಳಕಂಡಂತೆ ಇರುತ್ತದೆ.<br>(ರೂ. ಕೋಟಿಗಳಲ್ಲಿ)<br><table><tr><th>ವರ್ಷ</th><th>ತೆರಿಗೆ</th></tr><tr><td>2017-18</td><td>58098.73</td></tr><tr><td>2018-19</td><td>67868.82</td></tr><tr><td>2019-20</td><td>74280.95</td></tr><tr><td>2020-21</td><td>81079.15</td></tr><tr><td>2021-22</td><td>97574.70</td></tr><tr><td>2022-23</td><td>67198.00</td></tr></table></td></tr>
<tr><td>ಆ)</td><td>ರಾಜ್ಯದ ಕಾಮಗಾರಿಗಳ ಗುತ್ತಿಗೆದಾರರ ತಪಾಸಣೆ ಪ್ರಕರಣಗಳಲ್ಲಿ ಜಿ.ಎಸ್.ಟಿ. ಅಧಿಕಾರಿಗಳು ಟಿ.ಡಿ.ಎಸ್. ಅಧಿಕಾರಿಗಳು ಘೋಷಿಸಿದ ವಹಿವಾಟು ಅಥವಾ ಕಾಮಗಾರಿ ಗುತ್ತಿಗೆದಾರರು ಘೋಷಿಸಿದ ವಹಿವಾಟುಗಳ ಮೇಲಿನ ತೆರಿಗೆಗಳ ವ್ಯತ್ಯಾಸವನ್ನು ಸಂಗ್ರಹಿಸುವ ಬದಲು ವಂಚಿತ ವಹಿವಾಟು ಅಥವಾ ಇನ್ ಪುಟ್ ತೆರಿಗೆ ಕ್ರೆಡಿಟ್ ನ ಮೋಸದ ಕ್ಲೈಮ್ ಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ;</td><td>ಇಲ್ಲಿಯವರೆಗೂ 1245 ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ.</td></tr>
<tr><td>ಇ)</td><td>ಈ ಜಿ.ಎಸ್.ಟಿ. ತೆರಿಗೆಯನ್ನು ನಿರ್ವಹಣೆ ಮಾಡುವ ಅಧಿಕಾರಿ ಜಂಟಿ ಆಯುಕ್ತರ ವ್ಯಾಪ್ತಿಯಲ್ಲಿದ್ದು ಇವರು ಸ್ವಯಂ ಪ್ರೇರಿತ ಪರಿಷ್ಕರಣೆಗಾಗಿ ಆಡಿಟ್ ಮಾಡಿದ ಪ್ರಕರಣ ಹಾಗೂ ತಪಾಸಣೆ ಮಾಡಿದ ಪ್ರಕರಣಗಳು ಎಷ್ಟು? (ಪ್ರಕರಣ ಹಾಗೂ ತಪಾಸಣೆ ಮಾಡಿದ ಸಂಪೂರ್ಣ ಮಾಹಿತಿಯನ್ನು ನೀಡುವುದು).</td><td>ಜಿ.ಎಸ್.ಟಿ. ತೆರಿಗೆಯನ್ನು ನಿರ್ವಹಣೆ ಮಾಡುವ ಅಧಿಕಾರ ಜಂಟಿ ಆಯುಕ್ತರ ವ್ಯಾಪ್ತಿಯಲ್ಲಿದ್ದು, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-2 ಮತ್ತು ಮಂಗಳೂರು ಇವರು ಅನುಕ್ರಮವಾಗಿ 8 ಮತ್ತು 2 ಅಂದರೆ ಒಟ್ಟು 10 ಪ್ರಕರಣಗಳಲ್ಲಿ ಸ್ವಯಂ ಪ್ರೇರಿತ ಪರಿಷ್ಕರಣೆ ಕೈಗೊಂಡಿರುತ್ತಾರೆ.</td></tr>
</table>

ಸಂಖ್ಯೆ: ಆಇ 82 ಸಿಎಸ್ಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ